ಬೈರಸಂದ್ರದಲ್ಲಿರುವ ಸರ್ಕಾರಿ ವಸತಿ ಗೃಹಗಳಿಗೆ ಪ್ರತ್ಯೇಕ ನೀರಿನ ಮೀಟರಗಳನ್ನು ಅಳವಡಿಸಿರುವುದಿಲ್ಲ. ಇದರಿಂದ ಈ ವಸತಿ ಗೃಹಗಳಿಗೆ ವಾಸಿಸುವ ಸರ್ಕಾರಿ ನೌಕರುಗಳು ಪ್ರತಿ ತಿಂಗಳು ಹೆಚ್ಚು ನೀರಿನ ಬಿಲ್ ಪಾವತಿ ಮಾಡಬೇಕಾಗಿದೆ. ಇದರ ಜೊತೆಗೆ ವಾಣಿಜ್ಯ ದರದಲ್ಲಿ ನೀರನ್ನು ಒದಗಿಸುತ್ತಿರುವುದರಿಂದ ಪ್ರತಿ ತಿಂಗಳು, ಪ್ರತಿ ಮನೆಯವರಿಗೆ 150 ರಿಂದ 200 ರೂಪಾಯಿಗಳನ್ನು ನೀರಿಗಾಗಿ ಪಾವತಿ ಮಾಡಬೇಕಾಗಿದೆ. ಇದರ ಜೊತೆಗೆ ವಾಣಿಜ್ಯ ದರದಲ್ಲಿ ನೀರನ್ನು ಒದಗಿಸುತ್ತಿರುವುದರಿಂದ ಪ್ರತಿ ತಿಂಗಳು, ಪ್ರತಿ ಮನೆಯವರಿಗೆ150ರಿಂದ200ರೂಪಾಯಗಳನ್ನು ನೀರಿಗಾಗಿ ಪಾವತಿ ಮಾಡಬೇಕಾಗಿದೆ. ಆದುದರಿಂದ ಪ್ರತಿಯೊಂದು ವಸತಿ ಗೃಹಗಳಿಗೆ ಪ್ರತ್ಯೇಕ ನೀರಿನ ಮೀಟರನ್ನು ಒದಗಿಸಿ ಗೃಹ ಬಳಕೆಯ ದರವನ್ನು ವಿಧಿಸಲು ಸರ್ಕಾರ ಕ್ರಮವನ್ನು ಕೈಗೊಳ್ಳಬೇಕು. ಹಾಗೂ ಈ ವಸತಿ ಗೃಹಗಳನ್ನು ರಿಪೇರಿ ಮಾಡಿಸಿ ಮಳೆಯ ನೀರಿನ ಸೋರಿಕೆಯನ್ನು ತಪ್ಪಿಸಬೇಕೆಂದು ಸನ್ಮಾನ್ಯ ಲೋಕೋಪಯೋಗಿ ಸಚಿವರನ್ನು ಕೋರುತ್ತೇನೆ.

1.40 ಪಿ.ಎಂ.

(5) ದ. ಕನ್ನಡ ಜಿಲ್ಲೆಯಲ್ಲಿ ಸಮುದ್ರ ಕೊರತೆಕ್ಕೆ ಕಾಮಗಾರಿಗಳಿಗೆ ಹಣ ಬಿಡುಗಡೆ

ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಉಪಾಧ್ಯಕ್ಷರೆ, 1993ನೇ ಸಾಲಿನಲ್ಲಿ ಸಮುದ್ರ ಕೊರೆತ ಸಂಭವಿಸಿದಾಗ 12 ತುರ್ತು ಕಾಮಗಾರಿಗಳಿಗೆ 1.86 ಲಕ್ಷ ರೂ. ವೆಚ್ಚದ ಅಂದಾಜು ಪಟ್ಟಿಗೆ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳು ಆಡಳಿತ ಅನುಮೋದನೆ ಕೊಡದೆ 1994ನೇ ಸಾಲಿನ 33 ತುರ್ತು ಕಾಮಗಾರಿಗಳಿಗೆ 51.389 ಲಕ್ಷ ರೂ.ಗಳಿಗೆ ಆಡಳಿತ ಅನುಮೋದನೆ ನೀಡಿಯೂ ಹಣದ ಬಿಡುಗಡೆಯ ಪ್ರಕೃತಿ ವಿಕೋಪ ನಿಧಿಯಿಂದ ಬಿಡುಗಡೆ ಆಗದೇ 1995ನೇ ಸಾಲಿನಲ್ಲಿ ಮತ್ತೆ ಸಮುದ್ರ ಹಾಗೂ ನದೀ ಕೊರೆತಗಳ 26ಕಾಮಗಾರಿಗಳಿಗೆ 119.34 ಲಕ್ಷ ರೂ. ಆಡಳಿತ ಅನುಮೋದನೆ ಹಾಗೂ ಹಣವನ್ನು ಬಿಡುಗಡೆ ಮಾಡಿಲ್ಲ. ಸುಮಾರು 50 ಲಕ್ಷ ರೂ.ಗಳ ಕಾಮಗಾರಿ ಸಂಪೂರ್ಣಗೊಂಡಿದೆ. ಈಬಗ್ಗೆ ಸಣ್ಣ ನೀರಾವರಿ ಇಲಾಖೆಯವರು ಮಾನವೀಯ ದೃಷ್ಟಿಯಿಂದ ಊರಿಗೆ ಊರೇ ಮುಳುಗುವ ಸಂದರ್ಭದಲ್ಲಿ ಗುತ್ತಿಗೆದಾರರನ್ನು ಓಲೈಸಿ ಈ ಕಾಮಗಾರಿಗಳನ್ನು ಮಾಡಿಸಿ ಕೊನೆಗೆ ಇದು ಪ್ರಕೃತಿ ವಿಕೋಪ ನಿಧಿಯಿಂದ ಕಂದಾಯ ಇಲಾಖೆಯವರು ಕೊಡಬೇಕಾದುದು ಎಂದು ಹೇಳಿರುವುದು ನಿಜವಾದರೆ 119.34 ಲಕ್ಷ ರೂ.ಗಳಲ್ಲಿ ಕೇವಲ 5 ಲಕ್ಷ ರೂ. ಮಾತ್ರ ಬಿಡುಗಡೆ ಮಾಡಿದುದರಿಂದ ಇನ್ನುಮುಂದೆ ಸಮುದ್ರ ಕೊರೆತ ವಾರದಲ್ಲಿ ಗುತ್ತಿಗೆದಾರರು ಕೆಲಸಮಾಡದಿದ್ದ ಪರಿಸ್ಥಿತಿ ಉದ್ಭವಿಸಿದರೆ ಕಂದಾಯ ಇಲಾಖೆಯವರು ಇದಕ್ಕೆ ಹೊಣೆಗಾರರಾಗಬೇಕಾದೀತು. ಆದ್ದರಿಂದ ಈ ಭೀಕರ ಪ್ರಕೃತಿ ವಿಕೋಪದ ಎಲ್ಲಾ ತುರ್ತು ಕಾಮಗಾರಿಗಳಿಗೆ ತಕ್ಷಣ ಹಣವನ್ನು ಬಿಡುಗಡೆ ಮಾಡುವಂಥ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಕಂದಾಯ ಸಚಿವರಲ್ಲಿ ವಿನಂತಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಕಂದಾಯ ಸಚಿವರು) : 1993-94 ಹಾಗೂ 1994-95ನೇ ಸಾಲಿನಲ್ಲಿ ಸಮುದ್ರ ಕೊರೆತ ತಡೆಗೋಡೆ ಕಾಮಗಾರಿಗಳ ಬಾಬತ್ತು ಸರ್ಕಾರದಿಂದ ಅನುದಾನ ಒದಗಿಸಿಲ್ಲ. ಆದರೆ ಸದರಿ ಕಾಮಗಾರಿಗಳನ್ನು ಆಗಿನ ಮುಖ್ಯಮಂತ್ರಿಯವರು, ಜಿಲ್ಲಾ ಉಸ್ತುವಾರಿ ಸಚಿವರು, ಹಾಗೂ ಜಿಲ್ಲೆಯ ಇತರ ಸಚಿವರು ಪರಿಶೀಲಿಸಿ ತಾತ್ಕಾಲಿಕ ಗೋಡೆ ನಿರ್ಮಾಣ ಅತೀ

ಅವಶ್ಯವೆಂದು ಪರಿಗಣಿಸಿ ಕಾಮಗಾರಿಗಳನ್ನು ನಿರ್ವಹಿಸಲು ಆದೇಶಿಸಿದಂತೆ, 1993ನೇ ಸಾಲಿನಲ್ಲಿ 14.75 ಲಕ್ಷದ 15 ಕಾಮಗಾರಿಗಳನ್ನು ಮತ್ತು 1994-95ನೇ ಸಾಲಿಗೆ 51.389 ಲಕ್ಷದ 33 ಕಾಮಗಾರಿಗಳನ್ನು ನೀರಾವರಿ ಇಲಾಕೆ ಕೈಗೆತ್ತಿಕೊಂಡಿದ್ದು, ಸದರಿ ಕಾಮಗಾರಿಗಳಿಗೆ ಒಟ್ಟು 66.18 ಲಕ್ಷದ ಪಟ್ಟಿಗೆ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳು 1994-95ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ರೂ.25.00 ಲಕ್ಷಗಳನ್ನು ಸಣ್ಣ ನೀರಾವರಿ ಇಲಾಖೆಗೆ ಬಿಡುಗಡೆ ಮಾಡಿರುವುದಾಗಿ ಜಿಲ್ಲಾಧಿಕಾರಿಗಳು ದಿನಾಂಕ 19-6-95ರ ಪತ್ರದಲ್ಲಿ ತಿಳಿಸಿದ್ದಾರೆ.

ಮೇಲಿನ ಸಮುದ್ರ ಕೊರೆತ ಕಾಮಗಾರಿಗಳಿಗೆ ಸಂಬಂಧಿಸದಂತೆ, ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳಿಂದ ಬಂದಿದ್ದ ಪ್ರಸ್ತಾವನೆಯನ್ನು ದಿನಾಂಕ 21-4-1995ರಂದು ನಡೆದ ರಾಜ್ಯ ಮಟ್ಟದ " ಪ್ರಕೃತಿ ವಿಕೋಪ ಪರಿಹಾರ ನಿಧಿ"ಯ ಆಡಳಿತ ಮತ್ತು ನಿರ್ವಹಣಾ ಸಮಿತಿಯ ಮುಂದೆ ಮಂಡಿಸಲಾಗಿತ್ತು. ಸದರಿ ಸಭೆಯಲ್ಲಿ, ಸರ್ಕಾರದ ಕಾರ್ಯದರ್ಶಿ, ನೀರಾವರಿ ಇಲಾಖೆ ಇವರು ಪ್ರಸ್ತಾವನೆಯಲ್ಲಿರುವ ನಿರ್ವಹಿಸಿದ ಕಾಮಗಾರಿಗಳನ್ನು ಪರಿಶೀಲಿಸಿ, ಗುಣಮಟ್ಟ ಹಾಗೂ ಪೂರ್ಣಗೊಂಡಿರುವ ಕಾಮಗಾರಿಗಳ ಉಪಯುಕ್ತತೆ ಬಗ್ಗೆ ವರದಿಯನ್ನು ನೀಡುವಂತೆ ಅಭಿಪ್ರಾಯಿಸಲಾಗಿತ್ತು ಹಾಗೂ ನೀರಾವರಿ ಇಲಾಖೆಯ ಕಾರ್ಯದರ್ಶಿಗಳಿಂದ ವರದಿ ಬಂದ ತರುವಾಯ, ಬಾಕಿ ಬಿಲ್ಲುಗಳ ಪಾವತಿ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದೆಂದು ನಿರ್ಣಯಿಸಲಾಗಿತ್ತು.

ಅಂತೆಯೇ, ಸರ್ಕಾರದ ನೀರಾವರಿ ಕಾರ್ಯದರ್ಶಿಯವರನ್ನು ಸ್ಥಳ ಪರೀಕ್ಷೆ ನಡೆಸಿ ವರದಿ ನೀಡುವಂತೆ ದಿನಾಂಕ 5-5-1995 ರಲ್ಲಿ ಕೋರಲಾಗಿತ್ತು. ನಂತರ, ಈವರೆಗೆ ದಿನಾಂಕ 23-6-1995, 27-9-1995 ಹಾಗೂ 24-2-1996 ರಲ್ಲಿ ವರದಿ ಬಂದಿಲ್ಲದ ಬಗ್ಗೆ ನೀರಾವರಿ ಕಾರ್ಯದರ್ಶಿಯವರಿಗೆ ನೆನಪಿಸಲಾಗಿದೆ.

ನೀರಾವರಿ ಇಲಾಖೆ ಲೆಕ್ಕ ಶೀರ್ಷಿಕೆ "4711- Anti-Sea Erosion Measures" ಅಡಿಯಲ್ಲಿ ಆಯವ್ಯಯದಲ್ಲಿ 1995-96ನೇ ಸಾಲಿಗೆ 10 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದ್ದು, ಸದರಿ ಹಣವನ್ನು ಈ ಕಾಮಗಾರಿಗಳಿಗೆ ಬಳಸುವಲ್ಲಿ ಯಾವ ಆಡಚಣೆ ಇರುವುದಿಲ್ಲ. ಸದರಿ ಲೆಕ್ಕ ಶೀರ್ಷಿಕೆಯಲ್ಲಿನ ಹಣವು ಕೇಂದ್ರ ಸರ್ಕಾರದಿಂದ ಬಂದಿದ್ದು, ಇಂತಹ ಕೆಲಸಕ್ಕೆ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಹಣ ಬಿಡುಗಡೆ ಮಾಡುವುದು ಸಮಂಜಸವಲ್ಲವೆಂದೂ ಕಂಡುಬರುತ್ತದೆ. ಆದರೆ ಸಮುದ್ರ ಕೊರೆತದಿಂದ ಉಂಟಾದ ಆಸ್ತಿ ನಷ್ಟಕ್ಕೆ ಅಭಾವ ಪರಿಹಾರ ನಿಧಿಯಿಂದ ಹಣ ಬಿಡುಗಡೆ ಮಾಡಲಾಗುತ್ತಿದೆ.

ಮೇಲಿನ ಹಿನ್ನೆಲೆಯಲ್ಲಿ, ಆಡಳಿತಾತ್ಮಕ ಮಂಜೂರಾತಿ ನೀಡಿ ಸಂದಾಯ ಮಾಡಲು ಬಾಕಿ ಇರುವ ರೂ. 41.18 ಲಕ್ಷದ ಬಗ್ಗೆ ಸರ್ಕಾರದ ಕಾರ್ಯದರ್ಶಿ, ನೀರಾವರಿ ಇಲಾಖೆ ಇವರಿಂದ ಕಾಮಗಾರಿಗಳ ಬಗ್ಗೆ ವರದಿ ಸ್ವೀಕೃತವಾದ ನಂತರ, ಅನುದಾನ ಒದಗಿಸುವ ಬಗ್ಗೆ ರಾಜ್ಯ ಮಟ್ಟದ ಪ್ರಕೃತಿ ವಿಕೋಪ ಪತಿಹಾರ ನಿಧಿಯ ಆಡಳಿತ ಮತ್ತು ನಿರ್ವಹಣಾ ಸಮಿತಿ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗುವುದು.